# ಪ್ರಬಂಧ

ನಮ್ಮದು ಆಲದಮರದಂತಹ ವಿಸ್ತಾರವಾದ ಕುಟುಂಬ. ಬೇರೆ ಆಶ್ರಯವಿಲ್ಲದ ಬಾದರಾಯಣ ಸಂಬಂಧಿಗಳೆಷ್ಟೋ ಮಂದಿ ಈ ಮರದ ಆಶ್ರಯ ಪಡೆದಿದ್ದರು. ಅವರಲ್ಲೊಬ್ಬ ಅಜ್ಜಿಗೆ ಕಣ್ಣಿನಲ್ಲಿ ಪೊರೆ ಬೆಳೆದು ದೃಷ್ಟಿ ಮಂದವಾಗಿತ್ತು. ಬೇರೆಲ್ಲೋ ನೌಕರಿ ಮಾಡುತ್ತಿದ್ದ ಅವರ ಮಗ ತಿಂಗಳಿಗೆ ಐದು ರೂಪಾಯಿ ಮನಿಆರ್ಡರ್ ಮೂಲಕ ಕಳುಹಿಸುತ್ತಿದ್ದ. ಅದರಲ್ಲಿ ಒಂದೂವರೆ ರೂಪಾಯಿಗೆ ಕಣ್ಣಿನ ಮುಲಾಮು ಖರೀದಿಸಿ ಅದು ಹಾಕಿಸಿಕೊಳ್ಳಲು ನಮ್ಮ ಹಿಂದೆ ಮುಲಾಮು ಟ್ಯೂಬು ಹಿಡಿದು ಸುತ್ತುತ್ತಿದ್ದರು. ಅದನ್ನು ಹಾಕಿಕೊಂಡರೆ ಕಣ್ಣಿನ ದೃಷ್ಟಿ ಸರಿಹೋಗಬಹುದೆಂಬ ಭ್ರಮೆಯವರಿಗೆ. ಇನ್ನೂ ಹುಡುಗು ಬುದ್ಧಿಯ ನಾವು ಸಾಕಷ್ಟು ಸತಾಯಿಸಿ ಮುಲಾಮು ಹಾಕುತ್ತಿದ್ದೆವು. ಅದು ಕರಗಿ ಕಣ್ಣೊಳಗೆ ಇಳಿಯುವವರೆಗೆ ಯಾವುದೋ ಮೂಲೆಯಲ್ಲಿ ಅಂಗಾತ ಮಲಗಿರುತ್ತಿದ್ದರು. ಆ ಚಿತ್ರ ಕಣ್ಮುಂದೆ ಸುಳಿದು ನಡುಗಿದೆ. ಅವರಿಗೇನೋ ವಯಸ್ಸಾಗಿತ್ತು. ಆದರೆ ನನಗೆ?

"ಡಾಕ್ಟ್ರೇ, ಸತ್ಯವಾಗಿ ಹೇಳ್ತೀನಿ. ನನಗಿನ್ನೂ ಪೊರೆ ಬರುವಷ್ಟು ವಯಸ್ಸಾಗಿಲ್ಲ." ಅವರು ನಸುನಕ್ಕರು. "ನಾನೇನೋ ನಂಬ್ತೀನಿ. ಆದರೆ ಆ ಪೊರೆ ನಂಬಬೇಕಲ್ಲಾ! ಚಿಂತೆ ಬೇಡ. ಒಂದು ಸಣ್ಣ ಆಪರೇಶನ್ ಅಷ್ಟೇ."

"ಆಪ್ರೇಶನ್ನಾ? ಅದೂ ಕಣ್ಣಿಗೆ? ಬೇಡಪ್ಪ."

"ಏನೂ ಆಗೋಲ್ಲಾಮ್ಮ. ಭಯವೇ ಬೇಡ. ಯಾವತ್ತು ಮಾಡ್ಲಿ?"

"ಹೇಳ್ದೇ ಕೇಳ್ದೇ ಮಾಡಿಸ್ಕೊಂಡ್ರೆ ನಮ್ಮೆಜಮಾನ್ರು ಬೈತಾರೆ. ಅವ್ರನ್ನು ಕೇಳಿ ಮತ್ತೆ ಬರ್ತೀನಿ" ಎಂದು ಪತಿವ್ರತಾ ಶಿರೋಮಣಿಯಂತೆ ತಪ್ಪಿಸಿಕೊಂಡು ಮನೆಗೋಡಿದೆ. ಇನ್ನು ಮುಂದೆ ಕಣ್ಣು ಡಾಕ್ಟ್ರಬಳಿ ಹೋಗುವುದೇ ಬೇಡವೆಂದು ನಿರ್ಧರಿಸಿಯೂಬಿಟ್ಟೆ. ಆದರೆ ದೈವೇಚ್ಛೆ. ಅದೊಂದು ಘಟನೆ ನಡೆಯದಿದ್ದರೆ ಕಥೆಯೇ ಬೇರೆಯಾಗುತ್ತಿತ್ತು.

ಮಾಗಿ ಕಾಲದ ಸಂಜೆ. ಆರೂಕಾಲಿಗೆಲ್ಲಾ ಕತ್ತಲಾಗುತ್ತಾ ಬಂದು ಮಂಜಿನಿಂದಾಗಿ ಎಲ್ಲಾ ಕಡೆ ಮಬ್ಬುಮಬ್ಬಾಗಿತ್ತು. ಬೀದಿದೀಪ ಹತ್ತಲು ಸಾಕಷ್ಟು ಸಮಯವಿತ್ತು. ತರಕಾರಿ ತರಲು ಚೀಲಹಿಡಿದು ಹೊರಟಿದ್ದೆ. ಎದುರಿನಿಂದ ನಡೆದು ಬರುತ್ತಿದ್ದ ವ್ಯಕ್ತಿ ಎತ್ತರ, ಮೈಕಟ್ಟು, ನಡೆಯುವ ರೀತಿ ಎಲ್ಲವೂ ಥೇಟ್ ಚಿಕ್ಕಮ್ಮನ ಮಗ ಸೀನನನ್ನೇ ನೆನಪಿಸುತ್ತಿತ್ತು. ನಾವಿಬ್ಬರೂ ಮೊದಲೇ ಹೇಳಿದ ಆಲದಮರದ ಆಶ್ರಯದಲ್ಲಿ ಒಟ್ಟಿಗೇ ಬೆಳೆದವರು. ಅಂದಿನ ಸಲಿಗೆ ಈವರೆಗೂ ಮುಂದುವರೆದಿತ್ತು. ಆತ ಸಮೀಪಿಸುತ್ತಿದ್ದಂತೆ ಏನೋ ಸೀನ ಇತ್ಕಡೆ ಎಂದೆ. ಕೇಳಿಸಲೇ ಇಲ್ಲವೆಂಬಂತೆ ತಿರುಗಿ ನೋಡದೆ ಹೋಗುತ್ತಲೇ ಇದ್ದ. ಹಿಂದೊಮ್ಮೆ ನೋಡಿದ್ದಾಗ "ನಾನು ನಿಮ್ಮ ಮನೆಗೆ ಬರ್ತಿನಿ ಕಣೆ. ಆದ್ರೆ ಹೇಳ್ದೆ ಕೇಳ್ದೆ ಬಂದು ನಿನಗೆ ಸರ್‌ಪ್ರೈಸ್ ಕೊಡ್ತೀನಿ" ಎಂದಿದ್ದ. ಇದೇನಾ ಇವನ ಸರ್‌ಪ್ರೈಸ್? ಇರ್ಱಿ. ನಾನೇ ಇವನಿಗೆ ಸರ್‌ಪ್ರೈಸ್ ಕೊಡ್ತೀನಿ ಎಂದು ಹಿಂಬಾಲಿಸಿ ಹೋಗಿ ಬೆನ್ನಿಗೊಂದು ಬಿಗಿದೆ. ಕ್ಷಣಮಾತ್ರದಲ್ಲಿ ಸೀನ ಸರ್ದಾರ್ಜೀ ಆಗಿ ಮಾರ್ಪಟ್ಟಿದ್ದ! "ವ್ಹಾಟ್ ನಾನ್ಸೆನ್ಸ್ ಈಸ್ ದಿಸ್? ಆರ್ ಯೂ ಔಟ್ ಆಫ್ ಯುವರ್ ಮೈಂಡ್?" ಕಿರುಚಿದ. ರಸ್ತೆಯಲ್ಲಿ ತಮ್ಮಪಾಡಿಗೆ ಹೋಗುತ್ತಿದ್ದವರು ನಿಂತು ವೀಕ್ಷಕರಾದರು. ನಾನು ಬೆವೆತುಹೋದೆ. "ಸಾರಿ ಸರ್, ಈ ಥಾಟ್ ಯುವರ್ ಮೈ ಬ್ರದರ್ ಸೀನ. ಐ ಹ್ಯಾವ್ ಕ್ಯಾಟರ್ಯಾಕ್ಟ್. ಕೆನ್ನಾಟ್ ಸೀ ಪ್ರಾಪರ್ಲೀ" ತೊದಲಿದೆ. "ಗೋ ಎಂಡ್ ಗೆಟ್ ಆಪರೇಟೆಡ್. ಡೋಂಟ್ ಹಿಟ್ ಪೀಪಲ್ ಲೈಕ್ ದಿಸ್" ಬೊಗಳಿ ಮುಂದೆ ಹೋದ ಪುಣ್ಯಾತ್ಮ!

★★★

ಮರು ಮುಂಜಾನೆ ಕಣ್ಣಾಸ್ಪತ್ರೆಯಲ್ಲಿದ್ದೆ. ಕಣ್ಣಿನ ಆಪರೇಶನ್ ಎಂದೊಡನೆ ಎರಡನೇ ಮಹಡಿಗೆ ಹೋಗಿ ಶರಣ್ಯಾಳನ್ನು ನೋಡಿ ಎಂದಳು ಕೌಂಟರಿನಲ್ಲಿದ್ದ ಬೆಡಗಿ ಕಂಪ್ಯೂಟರ್ ಪರದೆಯಿಂದ ಕಣ್ಣು